ಈ ಕಲೆಯ ಸತ್ವ–ಗೌರವಕ್ಕೆ ಚ್ಯುತಿ ಬರದಂತೆ ಕೊರಿಯೋಗ್ರಫಿ ಮಾಡುವುದು ಮುಖ್ಯ. ಮರ್ಯಾದೆಯ ಚೌಕಟ್ಟನ್ನು ಮೀರದಂತೆ ಎಚ್ಚರ ವಹಿಸುವುದು ಅತ್ಯಂತ ಮುಖ್ಯ. ಸತ್ರಿಯಾದ ಪರಿಸೀಮಾದಲ್ಲಿಯೇ ಎಷ್ಟೊಂದು ಸಾಧ್ಯತೆಗಳಿವೆ ಎಂದರೆ, ಬಗೆದಷ್ಟೂ ಹೊಸದು ದೊರೆಯುತ್ತದೆ. ಅಂಕಿಯಾಗಳು, ಶ್ಲೋಕಗಳು, ನಂದಿಗೀತೆಗಳು... ಎಷ್ಟು ಅರಿತರೂ ಮುಗಿಯಿತೆಂದಿಲ್ಲ. ಒಟ್ಟಿನಲ್ಲಿ ನೃತ್ಯವು ಸತ್ರಿಯಾದ ನಿಜವಾದ ತತ್ವವೇನು ಎಂಬುದನ್ನು ಪ್ರೇಕ್ಷಕರಿಗೆ ತಲುಪಿಸಬೇಕು ಎಂಬ ಅಂಶ ಮನದಲ್ಲಿದ್ದರೆ ಕೊರಿಯೋಗ್ರಫಿ ಕಷ್ಟವಾಗದು. ಇದಕ್ಕೆ ಸಂಬಂಧಿಸಿ ನಾನು 'ಮತಿ ಅಖೋರಾ' ಮತ್ತು 'ಕೋಲ್‌ಶಿಕ್ಷಾ' ಎಂಬ ಪುಸ್ತಕಗಳನ್ನು ಬರೆದಿರುವೆ.

◆ **ಕಲಾಪ್ರಕಾರಗಳು, ವ್ಯಕ್ತಿಯನ್ನು ಅಧ್ಯಾತ್ಮದತ್ತ ಕೊಂಡೊಯ್ಯುವ ಮತ್ತೊಂದು ಹಾದಿ ಎಂಬ ನಂಬಿಕೆಯಿದೆ. ಹೌದೇ?**

ಸತ್ರಿಯಾ ನೃತ್ಯಕಲೆಯು ಒಂದು ಸಂಪತ್ತು. ಈ ಸಂಪತ್ತನ್ನು ಪಡೆಯಬೇಕಾದರೆ ಮೊತ್ತಮೊದಲನೆಯದಾಗಿ ನಮ್ಮ ಅಂತರಂಗದಲ್ಲಿ ಆನಂದ ಇರಬೇಕು. ನಮ್ಮ ನಿರಂತರವಾದ ಅಭ್ಯಾಸವು ಅಂತರಂಗದ ಆನಂದಕ್ಕೆ ಬೆಳಕನ್ನು ಕೊಡುತ್ತಾ ಹೋಗುತ್ತದೆ. ಅಂತರಂಗದಲ್ಲಿ ತೃಪ್ತಿ ಹೊಂದದೇ ಇದ್ದರೆ, ಆಕ್ರೋಶ, ದೂರು ದುಮ್ಮಾನಗಳು ಇದ್ದರೆ, ಈ ನೃತ್ಯಕಲೆಯನ್ನು ಜೀವಂತಿಕೆಯಿಂದ ಪ್ರಸ್ತುತಪಡಿಸುವುದು ಸಾಧ್ಯವಾಗುವುದಿಲ್ಲ; ಕೃತಿಯ ಪ್ರತಿಯೊಂದು ಸಾಲನ್ನು ವ್ಯಕ್ತಪಡಿಸುವುದು ಸಾಧ್ಯವಾಗುವುದಿಲ್ಲ. ಆನಂದ ಸ್ಥಿತಿಯನ್ನು ಸಾಧಿಸುವುದು ಇಲ್ಲಿ ಮುಖ್ಯವಾದುದು. ಇದೇ ಆನಂದವನ್ನು ಅಧ್ಯಾತ್ಮವು ಪರಮಾನಂದ ಎಂದು ಗುರುತಿಸುತ್ತದೆ. ನನ್ನ ಕಲಿಕೆಯ ಅವಧಿಯಲ್ಲಿ, ಅಭ್ಯಾಸದ ಅವಧಿಯಲ್ಲಷ್ಟೇ ನಾನು ಈ ಆನಂದವನ್ನು ಕಂಡುಕೊಂಡಿಲ್ಲ. ಶಿಷ್ಯವರ್ಗಕ್ಕೆ ಕಲಿಸುವಾಗಲೂ ಗುರುವಿನ ಮನಸ್ಸಿನಲ್ಲಿ ಆನಂದದ ಅಲೆಗಳು ಏಳುತ್ತವೆ. ನನಗೆ ಅಂತಹ ಕ್ಷಣಗಳು ಒಲಿದಿವೆ. ಎಷ್ಟೊಂದು ಜನರಿಗೆ ಕಲಿಸಿದ್ದೇನೆ! ಈ ಕಲೆಯು ಮುಂದುವರೆಯುತ್ತದೆ ಎಂಬ ಭರವಸೆ ಮೂಡಿದಾಗಲೂ ಒಂದು ಬಗೆಯ ಆನಂದ ಪುಟಿದೇಳುತ್ತದೆ. ಈ ಕಲೆಯ ಮೂಲಕ ಬದುಕಿನ ಗುರುತ್ವವನ್ನು, ಕಲೆಯ ಗುರುತ್ವವನ್ನು ಅರಿತುಕೊಳ್ಳಲು ಹೊರಟವರಿಗೆ ಎಂದಿಗೂ ನಿರಾಶೆಯಾಗದು.

◆ **ನೃತ್ಯದ ಹೊರತಾಗಿ ನಿಮಗೇನು ಇಷ್ಟ?**

ಸತ್ರಿಯಾ ನೃತ್ಯದ ಹೊರತಾಗಿ ನಾನು 'ಭಾವನಾ'ಗಳನ್ನು ಬಹಳ ಇಷ್ಟಪಡುತ್ತೇನೆ. ಭಾವನಾದಲ್ಲಿ ನಟನೆಯೇ ಪ್ರಧಾನ. ಅವು ನಾಟಕಗಳಂತೆ ಇರುತ್ತವೆ. ಕೆಡುಕಿನ ಮೇಲೆ ಒಳಿತು ಹೇಗೆ ವಿಜಯವನ್ನು ಸಾಧಿಸುತ್ತದೆ ಎಂಬ ಸಂದೇಶವನ್ನು ಕೊಡುವ ಕಥೆಗಳಿವು. 'ಅಂಕಿಯಾ ನಾಟ್' ಎಂದರೆ ಏಕಾಂಕದ ಭಾವನಾಗಳು. ಈ ಕ್ಷೇತ್ರ ನನಗೆ ಬಹಳ ಆಸಕ್ತಿದಾಯಕವೆನಿಸುತ್ತದೆ. ಗಾಯನ, ವಾದನದ ಜೊತೆಗೆ ನೃತ್ಯಕ್ಕೆ ಬದಲಾಗಿ ನಟನೆಯಿರುತ್ತದೆ. ಶ್ರೀಮಂತ ಶಂಕರದೇವ ಅವರು ಬರೆದಿರುವ ಭಾವನಾಗಳಲ್ಲಿ ಸಂಭಾಷಣೆಗಳು ಬ್ರಜಾವಲಿ ಭಾಷೆಯಲ್ಲಿರುತ್ತವೆ. ಕಷ್ಟಕರವಾದ ಸಂಸ್ಕೃತ ಭಾಷೆಗೆ ಬದಲಾಗಿ, ಶಂಕರದೇವ ಅವರೇ ಈ ಭಾಷೆಯನ್ನು ಸೃಷ್ಟಿಸಿದ್ದರು ಎನ್ನುತ್ತಾರೆ. ಜನಸಾಮಾನ್ಯರಿಗೆ ಅರ್ಥವಾಗುವ ಭಾಷೆಯಿರಬೇಕು, ಆದರೆ ಅದರಲ್ಲಿರುವ ಧಾರ್ಮಿಕ ಸಂದೇಶವು ಲಘುವಾಗಬಾರದು ಎಂಬುದು ಅವರ ಆಶಯವಾಗಿತ್ತು. ಆದರೆ ಈಗ ಸಾಮಾನ್ಯ ಅಸ್ಸಾಮಿ ಭಾಷೆಯಲ್ಲಿಯೇ ಭಾವನಾಗಳನ್ನು ಪ್ರಸ್ತುತಪಡಿಸಲಾಗುತ್ತದೆ. ನಾನು ಪುರಾಣಗಳನ್ನು ಆಧರಿಸಿದ ಭಾವನಾಗಳನ್ನು ಬರೆದಿರುವೆ. ನಿರ್ದೇಶನ ಮಾಡಿರುವೆ. ಇದರ ಹೊರತಾಗಿ ಹವ್ಯಾಸ ಎಂದರೆ, ಗಿಡ ನೆಡುವುದು, ತರಕಾರಿ ಬೆಳೆಸುವುದು. ನೆಟ್ಟ ಸಸಿಗಳು ದಿನವೂ ಚಿಗುರುವುದು, ಕಾಯಿಬಿಡುವುದನ್ನು ನೋಡುವುದೇ ಚಂದ. ಸತ್ರದಲ್ಲಿದ್ದಾಗ ಈ ಕೆಲಸವನ್ನು ಯಾವಾಗಲೂ ಮಾಡುತ್ತಿದ್ದೆ. ಈಗ ನಗರದಲ್ಲಿ ವಾಸಿಸುತ್ತಿದ್ದೇನೆ. ಟೆರೇಸಿನಲ್ಲಿಯೇ ದೊಡ್ಡ ಕೈತೋಟ ಮಾಡಿದ್ದೇನೆ. ಊಟಕ್ಕೆ ಬೇಕಾದ ತರಕಾರಿ ಟೆರೇಸಿನಲ್ಲಾದರೂ ಮಾಡಬಹುದು. ನನಗೆ ಹಸು ಸಾಕಾಣಿಕೆಯೆಂದರೆ ಬಹಳ ಪ್ರೀತಿ. ಅದಕ್ಕೆ ಟೆರೇಸಿನಂತೆ ಯಾವುದೇ ಬದಲಿ ಜಾಗ ಈ ನಗರದಲ್ಲಿ ಇಲ್ಲ. ನಾನೀಗ ಇಳಿ ವಯಸ್ಸಿನಲ್ಲಿ ಹಸುಗಳನ್ನು ತುಂಬಾ ಮಿಸ್ ಮಾಡಿಕೊಳ್ಳುತ್ತಿದ್ದೇನೆ ಅನಿಸ್ತಿದೆ.

●